ಭಟ್ಟರ್ ಸ್ಕಾಚ್

● **ಗಿಡ್ಡ ಗೋಪಾಲ, ಶ್ರೀರಂಗಪಟ್ಟಣ**
'ಪಾಪಿ ರಾಮೇಶ್ವರಕ್ಕೆ ಹೋದರೂ ಮೊಣಕಾಲು ನೀರು' ಅಂತಾರೆ. ಅದೇ ಹೆಸರಿನ ಕೆಫೆಗೆ ಹೋದರೆ ಏನಂತಾರೆ?
- ಪಾಪಿ ರಾಮೇಶ್ವರ ಕೆಫೆಗೆ ಕಾಫೀ ಕುಡಿಯಲು ಹೋದರೂ ಬಾಂಬ್ ಸ್ಫೋಟವಾಗುತ್ತೆ ಅಂತಾರೆ!

● **ಹರಿ ಓಂ ಶಾಸ್ತ್ರೀ, ಶಂಕರಪುರ**
ಭಟ್ರೇ, ಮೊಯಿಲಿ ಗದ್ಯ ರಚನೆ ಹಿನ್ನೆಲೆಯಲ್ಲಿ ನೆನಪಾಗುವ ನುಡಿಗಟ್ಟು ಯಾವುದು?
- ಗದ್ಯಂ ಪದ್ಯಂ ಪದ್ಯಂ ಹೃದ್ಯಂ!

● **ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು**
ಭಟ್ರೇ, ಮೊಯಿಲಿಯವರ 'ಮಹಾಯಾನ' ಗದ್ಯಕಾವ್ಯ ಅರ್ಥಮಾಡಿಕೊಳ್ಳಲು ಎಷ್ಟು ವರ್ಷಗಳು ಬೇಕು?
- ಎಷ್ಟು ಜನ್ಮ ಎತ್ತಿ ಬರಬೇಕು ಅಂತ ಕೇಳಿದ್ದಿದ್ದರೆ ಉತ್ತರಿಸುತ್ತಿದ್ದೆ!

● **ಅಮಾಸೆ ಸುಬ್ಬು, ಮೈಸೂರು**
ಭಟ್ರೇ, ಅಡುಗೆಮನೆ ಬಿಟ್ಟು ಹೊರಗೇ ಬರದ ಅಮ್ಮ ಇಷ್ಟವಾದ ಗುಂಟೂರು ಹುಡುಗೀನ ಬೇಡ ಅಂತಾರಲ್ಲ?
- ಹಾಗಾದ್ರೆ ಬ್ಯಾಡಗಿ ಹುಡುಗಿ ನೋಡಬೇಕಿತ್ತು!

● **ಬೆಂ.ಮು.ಮಾರುತಿ, ಮಲ್ಲತ್ತಹಳ್ಳಿ**
ಭಟ್ರೇ, ನಾಸೀರ್ ಹುಸೇನ್ ಎಂಬ ಆಸಾಮಿ ರಾಜ್ಯಸಭಾ ಸದಸ್ಯನಾಗಿದ್ದ ಎಂಬುದು ಗೊತ್ತೇ ಇರಲಿಲ್ಲವಲ್ಲ?
- ಅದಕ್ಕೂ 'ಪಾಕಿಸ್ತಾನ್ ಜಿಂದಾಬಾದ್' ಘೋಷಣೆಯೇ ಕಾರಣ ಅಂತೀಯಾ?!

● **ಉಮೇಶ್ ಎಂ. ಸಿರಾ, ರಾಮನಗರ**
ಭಟ್ರೇ, ಬಾಂಬ್ ಪತ್ತೆಹಚ್ಚಲು ಪೊಲೀಸರಿಗಿಂತ ಯಾವುದು ಪರಿಣಾಮಕಾರಿ?
- ಸಿಸಿಟಿವಿ!

● **ಗೋವರ್ಧನ ಪಟಗಾರ, ಹೊನ್ನಾವರ**
ಭಟ್ರೇ, ನನ್ನ ಕ್ರಶ್ ವ್ಯಕ್ತಪಡಿಸೋದು ಹೇಗೆ?
- ಅದನ್ನು ಇನ್ನಾದರೂ ವ್ಯಕ್ತಪಡಿಸದಿದ್ದರೆ ಕೃಶನಾಗ್ತೀಯ!

● **ರವಿ ದೇವರಾಯನದುರ್ಗ, (ಇಮೇಲ್ ಮೂಲಕ)**
ಭಟ್ರೇ, ಪಂಜಾಬಿ ರೈತರನ್ನು ಯಾವ ಕಾಯ್ದೆಯಡಿ ಬಂಧಿಸಬಹುದು?
- ನಮ್ಮ ಹರಿ ಪರಾಕ್ ಹೇಳುವಂತೆ, 'ಪೇಟಾ ಕಾಯ್ದೆ'ಯಡಿಯಲ್ಲಿ!

● **ಭವ್ಯಾ ಪ್ರಕಾಶ, (ಇಮೇಲ್ ಮೂಲಕ)**
ಭಟ್ರೇ, ಮೊಯಿಲಿಯವರ ಹೊಸ ಪುಸ್ತಕದ ಮೂರು ಅಧ್ಯಾಯಗಳನ್ನು ಹೇಗೆ ಓದಿದಿರಿ?
- ಬರೆದವರು ಯಾರೆಂಬುದು ಗೊತ್ತಿದ್ದಿದ್ದರೆ ಅದೂ ಸಾಧ್ಯವಾಗುತ್ತಿರಲಿಲ್ಲವೇನೋ?!

● **ವೀರೇಶ ಪಾಟೀಲ, ಬಾಗಲಕೋಟೆ**
ಭಟ್ರೇ, ನನ್ನನ್ನು ಬಚ್ಚ ಅಂತ ಬೈತಾಳಲ್ಲ?
- ಆ 'ಬೈಗುಳ'ದ ಮುಂದೆ 'ನ್' ಅಂತ ಸೇರಿಸು ಅಂತ ಹೇಳಬೇಕಿತ್ತು!

ಬಲು ಅಪರೂಪ ನಮ್ ದೋಸ್ತಿ...!

ವಿದೇಶವಾಸಿ

ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

'ನಾವು ಯಾವಾಗಲೂ ಮಾಡುತ್ತಿರುವುದನ್ನೇ ಮಾಡುತ್ತ ಕುಳಿತರೆ, ನಮಗೆ ಯಾವಾಗಲೂ ಸಿಗುವುದೇ ಸಿಗುತ್ತದೆಯೇ ವಿನಾ ಹೆಚ್ಚಿನದ್ದೇನೂ ಸಿಗುವುದಿಲ್ಲ, ಹೊಸತೇನೂ ಕಾಣುವುದಿಲ್ಲ' ಎಂಬ ಮಾತಿದೆ. ಅದಕ್ಕಾಗಿಯೇ ಪ್ರಾಜ್ಞರು 'ಬದಲಾವಣೆ ಜಗದ ನಿಯಮ' ಎಂದಿದ್ದಾರೆ. ಈ ಸಂದರ್ಭದಲ್ಲಿ ಅಮೆರಿಕದ ಮಾಜಿ ಅಧ್ಯಕ್ಷ ಬಿಲ್ ಕ್ಲಿಂಟನ್ ಹೇಳಿದ ಮಾತು ನೆನಪಾಗುತ್ತದೆ- 'ಹಳೆಯದನ್ನೇ ಮಾಡುವುದಕ್ಕೆ ತೆರಬೇಕಾದ ಬೆಲೆ, ಬದಲಾವಣೆಗೆ ಕಟ್ಟಬೇಕಾದ ಬೆಲೆಗಿಂತಲೂ ಹೆಚ್ಚಾಗಿರುತ್ತದೆ'. ಬಿಲ್ ಕ್ಲಿಂಟನ್‌ರ ಕುರಿತು ವಿವಾದಗಳಿರಬಹುದು, ಪರ-ವಿರೋಧಗಳಿರಬಹುದು. ಆದರೆ ಅವರು ಬದಲಾವಣೆಯ ಕುರಿತು ಹೇಳಿದ ಈ ಮಾತನ್ನು ಸಾರಾಸಗಟಾಗಿ ತಳ್ಳಿಹಾಕುವಂತಿಲ್ಲ.

ಬದಲಾವಣೆಗೆ ನಮ್ಮ ಜೀವನಕ್ಕಿಂತ ಒಳ್ಳೆಯ ಉದಾಹರಣೆ ಬೇಕೆ? ಇಂದು ನಮ್ಮ ಆಹಾರ, ವಿಹಾರ, ತಂತ್ರಜ್ಞಾನ, ಉಳಿಯುವ ಮನೆ, ತೊಡುವ ಬಟ್ಟೆ, ಬಳಸುವ ವಸ್ತುಗಳು, ಎಲ್ಲವೂ ಬದಲಾಗಿವೆ. ಇವೆಲ್ಲ ಭೌತಿಕ ಬಿಡಿ. ಅದರ ಹೊರತಾಗಿ ಸಾಮಾಜಿಕವಾಗಿ, ರಾಜಕೀಯವಾಗಿಯೂ ಸಾಕಷ್ಟು ಬದಲಾವಣೆಯನ್ನು ನಾವು ಕಾಣುತ್ತಿದ್ದೇವೆ. ಜಾರ್ಜ್ ಬರ್ನಾರ್ಡ್ ಶಾ ಹೇಳುವಂತೆ, 'ಬದಲಾವಣೆಯಾಗದಿದ್ದರೆ ಪ್ರಗತಿ ಸಾಧ್ಯವಿಲ್ಲ, ತಮ್ಮ ಮನಸ್ಸನ್ನೇ ಬದಲಾಯಿಸಲು ಸಾಧ್ಯವಾಗದವರು ಏನನ್ನೂ ಬದಲಾಯಿಸಲಾರರು'. ಇದು ಮನುಷ್ಯನ ವಿಷಯವಾದರೂ ಸರಿ, ರಾಜ್ಯದ ವಿಷಯವಾದರೂ ಸರಿ ಅಥವಾ ದೇಶದ ವಿಷಯವಾದರೂ ಸರಿ. ತಮ್ಮ ಭವಿತವ್ಯದ ಒಳಿತಿಗಾಗಿ ಬದಲಾಗುತ್ತಲೇ ಇರಬೇಕು.

ಎಷ್ಟೋ ಬಾರಿ ಒಳ್ಳೆಯ ಸ್ನೇಹಿತರು ಪರಸ್ಪರ ವೈರಿಗಳಾಗುತ್ತಾರೆ, ವೈರಿಗಳೂ ಒಂದಾಗುತ್ತಾರೆ. ಹಾಗೆಯೇ, ಮಿತ್ರ ರಾಷ್ಟ್ರಗಳೂ ಶತ್ರುಗಳಾಗುತ್ತವೆ, ಶತ್ರುಗಳೂ ಮಿತ್ರ ರಾಷ್ಟ್ರಗಳಾಗಿ ಬದಲಾಗುತ್ತವೆ. ಇದಕ್ಕೆ ಒಳ್ಳೆಯ ಉದಾಹರಣೆ, ಗಾಝಾದ ಇತ್ತೀಚಿನ ಯುದ್ಧ ಆರಂಭವಾಗುವುದಕ್ಕಿಂತ ಮೊದಲು, ಯುಎಇ ಮತ್ತು ಇಸ್ರೇಲ್ ಸ್ನೇಹಹಸ್ತ ಕುಲುಕಿದ್ದು. ಸೌದಿ ಅರೇಬಿಯಾ, ಬಹ್ರೈನ್ ಕೂಡ ಅದೇ ಹಾದಿಯಲ್ಲಿದ್ದವು. ಕೆಲವೇ ವರ್ಷಗಳ ಹಿಂದೆ, ಇಸ್ರೇಲ್ ಮತ್ತು ಅರಬ್ ರಾಷ್ಟ್ರಗಳ ನಡುವೆ ಸ್ನೇಹ ಬಿಡಿ, ಮಾತುಕತೆ ನಡೆಯುತ್ತದೆ ಎನ್ನುವುದನ್ನೇ ನಂಬುವಂತಿರಲಿಲ್ಲ. ಅಷ್ಟು ದೂರ ಹೋಗುವುದು ಏಕೆ? ಭಾರತ ಮತ್ತು ಅರಬ್ ರಾಷ್ಟ್ರಗಳ ನಡುವಿನ ಸಂಬಂಧವನ್ನೇ ನೋಡಿದರೆ, ಹತ್ತು ವರ್ಷದ ಹಿಂದಿನ ಸಂಬಂಧಕ್ಕೂ ಇಂದಿನ ಸಂಬಂಧಕ್ಕೂ ಎಷ್ಟು ಬದಲಾಗಿದೆ ಎಂದು ತಿಳಿಯುತ್ತದೆ.

ಭಾರತದ ಗುಪ್ತಚರ ಇಲಾಖೆಯ ವರದಿಯ ಪ್ರಕಾರ, 2011ರಿಂದ 2013ರವರೆಗಿನ ಎರಡು ವರ್ಷದ ಅವಧಿಯಲ್ಲಿ ಅರಬ್ ದೇಶಗಳಿಂದ ಸುಮಾರು 25 ಸಾವಿರ ಇಸ್ಲಾಂ ಧರ್ಮದ ಮೌಲ್ವಿಗಳು, ವಿದ್ವಾಂಸರು, ಬುದ್ಧಿಜೀವಿಗಳು ಧರ್ಮ ಪ್ರಚಾರಕ್ಕೆಂದು ಭಾರತಕ್ಕೆ ಬಂದಿದ್ದರು. ಅವರು ನಡೆಸುವ ವಿಚಾರ ಸಂಕಿರಣ, ಅಧ್ಯಯನ ಗೋಷ್ಠಿಯ ಹೆಸರಿನಲ್ಲಿ ಭಾರತಕ್ಕೆ ಬಂದ ಹಣ ಬರೋಬ್ಬರಿ ಒಂದು ಸಾವಿರದ ಏಳುನೂರು ಕೋಟಿ ರುಪಾಯಿ. ಅವೆಲ್ಲ ಯಾವುದೋ ಆಸ್ಪತ್ರೆ, ಶಾಲೆ, ಉದ್ಯಾನ, ಕೊನೆ ಪಕ್ಷ ಮಸೀದಿಗೂ ಬಳಕೆಯಾಗಲಿಲ್ಲ. ವಿಶ್ವದಾದ್ಯಂತ ಬೇರೆ ಬೇರೆ ದೇಶಗಳಲ್ಲಿ ಮಸೀದಿ ನಿರ್ಮಾಣಕ್ಕೆಂದು ಅರಬ್ ರಾಷ್ಟ್ರಗಳು ಮೊದಲಿಂದಲೂ ಹಣದ ಸಹಾಯ ಮಾಡಿಕೊಂಡು ಬಂದಿವೆ. ಅದಕ್ಕೆ ಹೋಲಿಸಿದರೆ, ಭಾರತದಲ್ಲಿ ಮಸೀದಿ ಕಟ್ಟಲು ಅರಬ್ ರಾಷ್ಟ್ರದ ಹಣ ಬಳಸಿದ್ದು ಕಡಿಮೆ ಎಂದೇ ಹೇಳಬಹುದು. ಭಾರತದಲ್ಲಿ ಕೊಲ್ಲಿ ರಾಷ್ಟ್ರದ ಹಣ ಹೆಚ್ಚಾಗಿ ಬಳಕೆಯಾದದ್ದು ಮದ್ರಸಾಗಳ ನಿರ್ಮಾಣಕ್ಕೆ ಮತ್ತು ಧರ್ಮ ಪ್ರಚಾರಕ್ಕೆ.

ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಾಗ ದೇಶದಲ್ಲಿ ನೂರಕ್ಕಿಂತಲೂ ಕಮ್ಮಿ ಮದ್ರಸಾಗಳಿದ್ದವಂತೆ. ಸ್ವಾತಂತ್ರ್ಯ ಸಿಕ್ಕಿ ಅರವತ್ತು ವರ್ಷವಾದಾಗ ಈ ಸಂಖ್ಯೆ ಐದು ಲಕ್ಷಕ್ಕೆ ಏರಿತು. ಇದರಲ್ಲಿ ಅರಬ್ ರಾಷ್ಟ್ರಗಳ ಪಾಲು ಹದಿನಾಲ್ಕು ಬಿಲಿಯನ್ ರುಪಾಯಿಗಳು ಎಂಬ ಅಂದಾಜಿದೆ. ಸೌದಿ ಅರೇಬಿಯಾದ ಇಂದಿನ ಯುವ ರಾಜ ಮೊಹಮ್ಮದ್ ಬಿನ್ ಸಲ್ಮಾನ್ ಆಡಳಿತದ ಚುಕ್ಕಾಣಿ ಹಿಡಿಯುವುದಕ್ಕಿಂತ ಮೊದಲಿನ ಇಪ್ಪತ್ತು ವರ್ಷದಲ್ಲಿ, ವಿದೇಶಗಳಲ್ಲಿ ಧರ್ಮ ಪ್ರಚಾರಕ್ಕೆಂದೇ ದೇಶ ತೊಂಬತ್ತು ಬಿಲಿಯನ್ ಡಾಲರ್ ಖರ್ಚು ಮಾಡಿದೆ ಎಂಬ ವರದಿಯಿದೆ.

ಒಂದು ಕಾಲದಲ್ಲಿ ಕಾಶ್ಮೀರದಲ್ಲಿ ನಡೆಯುತ್ತಿದ್ದ ಗಲಭೆಗಳಿಗೆ, ಅಲ್ಲಿಯ ಯುವಕರಿಗೆ ಕಲ್ಲು ತೂರುವುದಕ್ಕೆ ಕೂಡ ವಿದೇಶಗಳಿಂದ ಹಣ ಬರುತ್ತಿತ್ತು ಎನ್ನುವುದು ಗುಟ್ಟಾಗಿ ಉಳಿದಿರಲಿಲ್ಲ. ಮೇಲ್ನೋಟಕ್ಕೆ ಪಾಕಿಸ್ತಾನದ ಮೂಲಕ ಹಣ ಹರಿದುಬರುತ್ತಿದೆ, ಪಾಕಿಸ್ತಾನ ಇವರಿಗೆ ತರಬೇತಿ ನೀಡುತ್ತಿದೆ ಎಂದು ಕಂಡರೂ, ಶ್ರೀಮಂತ ದೇಶವಲ್ಲದ ಪಾಕಿಸ್ತಾನ ಬೇರೆ ದೇಶದ ಸಹಾಯವಿಲ್ಲದೆ ಇದನ್ನೆಲ್ಲ ಮಾಡಿಸಲು ಸಾಧ್ಯವಿಲ್ಲ ಎನ್ನುವುದು ಎಲ್ಲರಿಗೂ ತಿಳಿದಿತ್ತು. ಒಂದು ಹಂತದಲ್ಲಿ ಪಾಕಿಸ್ತಾನವೂ ಇದೇ ನೆಪದಲ್ಲಿ, ಧರ್ಮದ ಹೆಸರಿನಲ್ಲಿ ಅರಬ್ ರಾಷ್ಟ್ರಗಳಿಂದ ಸಾಕಷ್ಟು ಹಣ ಪಡೆಯುತ್ತಿತ್ತು. ಅರಬ್ ರಾಷ್ಟ್ರಗಳೂ ಅದಕ್ಕೆ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಇನ್ನೂ ನೂರು ವರ್ಷಕ್ಕೆ ಸಾಕಾಗುವಷ್ಟು ತೈಲ ಸಂಪನ್ಮೂಲ ತಮ್ಮ ದೇಶದಲ್ಲಿದೆ ಎಂಬ ಭರವಸೆ ಇರುವಾಗ ಯಾರು ತಲೆ ಕೆಡಿಸಿಕೊಳ್ಳುತ್ತಾರೆ ಹೇಳಿ? ಮುಂದೊಂದು ದಿನ ತೈಲಕ್ಕೆ ಪರ್ಯಾಯ ವ್ಯವಸ್ಥೆ ಬರಬಹುದು, ಅದರಿಂದಾಗಿ ತಮ್ಮ ವ್ಯಾಪಾರಕ್ಕೆ ಹಾನಿಯಾಗಬಹುದು, ಬೇರೆಯವರನ್ನು ಉದ್ಧಾರ ಮಾಡಲು ಹೋಗಿ ತಾವು ಸಂಕಷ್ಟಕ್ಕೆ ಸಿಲುಕಬಹುದು ಎಂದು ಆ ಕ್ಷಣದಲ್ಲಿ ಯಾರೂ ಊಹಿಸಿರಲಿಕ್ಕಿಲ್ಲ.

ಕಾಲ ಹೇಗೆ ಬದಲಾಯಿತು ಎಂದರೆ, ಇಂದು ಎಲ್ಲ ಅರಬ್ ರಾಷ್ಟ್ರಗಳೂ ಅಭಿವೃದ್ಧಿಯ ಕಡೆ ಮುಖ ಮಾಡಿದವು. ಪೆಟ್ರೋಲ್, ಡೀಸೆಲ್‌ಗಳಿಗೆ ಬದಲಿ ವ್ಯವಸ್ಥೆ ಬರುತ್ತಿದ್ದಂತೆಯೇ, ಕೊಲ್ಲಿ ರಾಷ್ಟ್ರಗಳೂ ಇತರ ಉತ್ಪನ್ನ, ಬೇರೆ ವ್ಯಾಪಾರದ ಹುಡುಕಾಟಕ್ಕೆ ತೊಡಗಿದವು. ಒಂದು ಸಣ್ಣ ಅಂಕಿ-ಅಂಶ ಹೇಳುವುದಾದರೆ, ಮುಂದಿನ ನಾಲ್ಕು ವರ್ಷದಲ್ಲಿ ಅಮೆರಿಕದಲ್ಲಿ ಹೊಸ ಕಾರಿನ ಮಾರಾಟದಲ್ಲಿ ಇಲೆಕ್ಟ್ರಿಕ್ ಕಾರಿನ ಸಂಖ್ಯೆ ಶೇಕಡ ಇಪ್ಪತ್ತರಷ್ಟಾಗಲಿದೆ. ಹಣದ ಲೆಕ್ಕಾಚಾರದಲ್ಲಿ ಹೇಳುವುದಾದರೆ, ಸುಮಾರು ನೂರ ಐವತ್ತು ಬಿಲಿಯನ್ ಡಾಲರ್. 2030ರ ವೇಳೆಗೆ ಈ ಸಂಖ್ಯೆ ಶೇಕಡ ಮೂವತ್ತರಷ್ಟಾಗಲಿದೆ. ಭಾರತವೂ ಇಲೆಕ್ಟ್ರಿಕ್ ಕಾರುಗಳ ಉತ್ಪಾದನೆಯಲ್ಲಿ ತೊಡಗಿದೆ. ಟೊಯೋಟಾ, ವೊಲ್ವೋದಂಥ ಪ್ರತಿಷ್ಠಿತ ಕಾರು ತಯಾರಕ ಸಂಸ್ಥೆಗಳು ಇನ್ನು ಕೆಲವೇ ವರ್ಷದಲ್ಲಿ ಗ್ಯಾಸೊಲಿನ್ ಕಾರು ಉತ್ಪಾದನೆ ನಿಲ್ಲಿಸಿ, ಇಲೆಕ್ಟ್ರಿಕ್ ಕಾರನ್ನು ಮಾತ್ರ ತಯಾರಿಸುವುದಾಗಿ ಘೋಷಿಸಿವೆ. ಅಲ್ಲಿಗೆ, ಕೇವಲ ಪೆಟ್ರೋಲ್, ಡೀಸೆಲ್ ಮಾತ್ರ ನಂಬಿಕೊಂಡು ದೇಶ ನಡೆಸಲು ಸಾಧ್ಯವಿಲ್ಲ ಎಂದು ಅರಿತ ದೇಶಗಳು, ತಾವೂ ಸೋಲಾರ್, ರಿನೆವೇಬಲ್ ಎನರ್ಜಿಯ ಯೋಜನೆಗೆ ಕೈಜೋಡಿಸುವುದಾಗಿ ಹೇಳಿವೆ. ಸೌದಿ ಅರೇಬಿಯಾದ ಬಹು ನಿರೀಕ್ಷಿತ ನಿಯೋಮ್ ಶಹರದಲ್ಲಿ ಇಲೆಕ್ಟ್ರಿಕ್ ಕಾರುಗಳ ಸಂಶೋಧನೆ ಮತ್ತು ಉತ್ಪಾದನೆ ಘಟಕ ತಲೆಯೆತ್ತಿ ನಿಲ್ಲುತ್ತಿದೆ ಎಂದರೆ ನೀವು ನಂಬಲೇಬೇಕು! ನಿಮಗೆ ತಿಳಿದಿರಲಿ, ಸೌದಿ ಅರೇಬಿಯಾದಲ್ಲಿ ಮೊಹಮ್ಮದ್ ಬಿನ್ ಸಲ್ಮಾನ್ ಬಂದ ನಂತರ ಪೆಟ್ರೋಲಿಯಮ್ ಉತ್ಪನ್ನಗಳ ಹೊರತಾಗಿ ನಡೆಯುವ ಉದ್ಯಮ ಮೂರು ಪಟ್ಟು ಹೆಚ್ಚಿನ ಲಾಭ ಗಳಿಸುತ್ತಿದೆ!

ತೈಲ ಉತ್ಪನ್ನವೊಂದನ್ನೇ ನಂಬಿಕೊಂಡು ಬದುಕಲು ಸಾಧ್ಯವಿಲ್ಲ ಎಂದು ಅರಿತ ದೇಶಗಳು ವಿದೇಶಗಳಲ್ಲಿ ವ್ಯಾಪಾರಕ್ಕೆ ಹಣ ಹೂಡಲು ಮುಂದಾದವು. ಬಹುತೇಕ ಅರಬ್ ದೇಶಗಳು ತಮ್ಮ ಧರ್ಮ, ಆಚರಣೆಗಳನ್ನೆಲ್ಲ ತಮ್ಮ ದೇಶದ ಒಳಗಿಟ್ಟುಕೊಂಡು, ದೇಶದ ಬಾಗಿಲನ್ನು ತೆರೆದು ವಿಶ್ವವನ್ನು ಸ್ವಾಗತಿಸಲು ಮುಂದಾದವು. ಅಲ್ಲಿಗೆ ಧರ್ಮ ಪ್ರಚಾರಕ್ಕೆ, ಭಯೋತ್ಪಾದನೆಗೆ ಹಣ ಪೋಲಾಗುವುದು ಬಹುತೇಕ ನಿಂತುಹೋಯಿತು.

ಅದೇ ಸಮಯಕ್ಕೆ ಕೊಲ್ಲಿ ರಾಷ್ಟ್ರಗಳ ಮಗ್ಗುಲಲ್ಲೇ ಒಂದು ಮುಳ್ಳು ಹುಟ್ಟಿಕೊಂಡಿತು. ಸೌದಿ ಅರೇಬಿಯಾದ ಪಕ್ಕದ ಯೆಮೆನ್‌ನಲ್ಲಿ ಹೌತಿಯಂಥ ಆತಂಕಿ ಸಂಘಟನೆಗಳು ತಲೆ ಎತ್ತಿದವು. ಅವರನ್ನು ನಿಯಂತ್ರಣಕ್ಕೆ ತರಲು ಸೌದಿ ಅರೇಬಿಯಾ ನೇತೃತ್ವದಲ್ಲಿ ಒಂಬತ್ತು ದೇಶಗಳು ಒಟ್ಟಾಗಿ ನಿರಂತರ ಒಂಬತ್ತು ವರ್ಷ ಯುದ್ಧ ಮಾಡಬೇಕಾಯಿತು. ಭಯೋತ್ಪಾದಕ ಸಂಘಟನೆಗಳಿಗೆ ಸಹಾಯ ಮಾಡುತ್ತಿದೆ ಎಂಬ ಒಂದೇ ಕಾರಣಕ್ಕೆ ಸೌದಿ, ಬಹ್ರೈನ್, ಯುಎಇಯಂಥ ದೇಶಗಳು, ತಮ್ಮ ಪಕ್ಕದಲ್ಲೇ ಇರುವ ಕತಾರ್‌ನೊಂದಿಗೆ ಕೆಲವು ವರ್ಷಗಳ ಕಾಲ ಸಂಬಂಧವನ್ನೇ ಕಡಿದುಕೊಂಡವು.

ಅರಬ್ ರಾಷ್ಟ್ರಗಳ ಹೊಸ ತಲೆಮಾರುಗಳಾದ, ಅಬುಧಾಬಿಯ ರಾಜರುಗಳಾಗಿದ್ದ ಶೇಖ್ ಝಾಯೆದ್ ಬಿನ್ ಸುಲ್ತಾನ್, ಶೇಖ್ ಖಲೀಫಾ ಬಿನ್ ಝಾಯೆದ್, ಈಗಿನ ದೊರೆ ಶೇಖ್ ಮೊಹಮ್ಮದ್ ಬಿನ್ ಝಾಯೆದ್ ಅಲ್ ನಹ್ಯಾನ್, ದುಬೈ ಆಳುವ ಶೇಖ್ ಮೊಹಮ್ಮದ್ ಬಿನ್ ರಾಶಿದ್ ಅಲ್ ಮಕ್ತೂಮ್, ಸೌದಿ ಅರೇಬಿಯಾದ ಮೊಹಮ್ಮದ್ ಬಿನ್ ಸಲ್ಮಾನ್, ಇವರೆಲ್ಲ ಜಗತ್ತನ್ನು ವಿಶಾಲ ದೃಷ್ಟಿಕೋನದಿಂದ ಕಂಡವರು. ಪಾಶ್ಚಿಮಾತ್ಯ ದೇಶಗಳಂತೆ ಅಥವಾ ಅದಕ್ಕಿಂತಲೂ ಹೆಚ್ಚು ತಮ್ಮ ದೇಶ ಅಭಿವೃದ್ಧಿ ಹೊಂದಬೇಕು ಎಂದು ಕನಸು ಕಂಡ ದ್ರಷ್ಟೇ ಅಲ್ಲ, ಆ ನಿಟ್ಟಿನಲ್ಲಿ ಶ್ರಮಿಸಿದವರು, ಶ್ರಮಿಸುತ್ತಿರುವವರು. ಇವರೆಲ್ಲ ಪ್ರಪಂಚ ತಮ್ಮ ದೇಶವನ್ನು ಬೇರೆಯದೇ ದೃಷ್ಟಿಕೋನದಿಂದ ನೋಡುವಂತಾಗಬೇಕು, ವಿಶ್ವದ ಇತರ ರಾಷ್ಟ್ರಗಳ ಜತೆಗೆ ತಾವೂ ಹೆಜ್ಜೆ ಹಾಕುವಂತಾಗಬೇಕು ಎಂದು ಕನಸು ಕಂಡರು.

ಈ ಬೆಳವಣಿಗೆಯಿಂದಾಗಿ, ಕೊಲ್ಲಿ ರಾಷ್ಟ್ರಗಳು ಪಾಕಿಸ್ತಾನದಿಂದ ದೂರವಾಗಿ ಭಾರತಕ್ಕೆ ಹತ್ತಿರವಾಗತೊಡಗಿದವು. ಪರಿಣಾಮವಾಗಿ, ಭಾರತ ಯಾವತ್ತೂ ತಮ್ಮನ್ನು ದುರ್ಬಳಕೆ ಮಾಡಿಕೊಂಡಿಲ್ಲ ಎನ್ನುವ ಸತ್ಯದ ಅರಿವು ಬಹುತೇಕ ಕೊಲ್ಲಿ ರಾಷ್ಟ್ರಗಳಿಗೆ ಅರ್ಥವಾಗತೊಡಗಿತ್ತು. ಅದಕ್ಕೆ ತಕ್ಕಂತೆ ಕಳೆದ ಒಂದು ದಶಕದಲ್ಲಿ ಜಾಗತಿಕವಾಗಿ ಭಾರತದ ನಿಲುವು, ಮುಸ್ಲಿಂ ರಾಷ್ಟ್ರಗಳೊಂದಿಗಿನ ಇಂದಿನ ಸರಕಾರದ ನಡೆ, ಇತ್ಯಾದಿಗಳು ಹೊಸ ಬಾಂಧವ್ಯಕ್ಕೆ ಬುನಾದಿಯಾದವು. ಸೌದಿ ಅರೇಬಿಯಾದಲ್ಲಿ ಯೋಗ ಶಿಕ್ಷಣ, ಅಲ್ಲಿಯ ಶಾಲೆಗಳಲ್ಲಿ ರಾಮಾಯಣ-ಮಹಾಭಾರತವನ್ನು ಓದಿಸುವ ವಿಚಾರ, ಯುಎಇಯ ಅಬುಧಾಬಿಯಲ್ಲಿ ಸ್ವಾಮಿನಾರಾಯಣ ಮಂದಿರದ ನಿರ್ಮಾಣ, ಕತಾರ್‌ನಲ್ಲಿ ಮರಣದಂಡನೆಗೆ ಒಳಗಾದ ಎಂಟು ಭಾರತೀಯ ನೌಕಾಸೇನೆಯ ಪೂರ್ವ ಅಧಿಕಾರಿಗಳಿಗೆ ಜೀವದಾನ, ಎಲ್ಲವೂ ಈ ಬಾಂಧವ್ಯದ ಫಲಶೃತಿಯೇ ಹೊರತು ಇನ್ನೇನೂ ಅಲ್ಲ.

ಇವೆಲ್ಲ ಒಂದು ಕಡೆಯಾದರೆ, ಇನ್ನೊಂದೆಡೆ ಕೊಲ್ಲಿ ರಾಷ್ಟ್ರಗಳು ಕಾಶ್ಮೀರದಲ್ಲಿ ಹಣ ಹೂಡಲು ಮುಂದಾಗಿವೆ. ಭಾರತದ ಇತರ ಭಾಗಗಳಲ್ಲಿ ಈಗಾಗಲೇ ಸಾಕಷ್ಟು ಹಣ ಹೂಡಿರುವ ಕೊಲ್ಲಿಯ ಕಂಪನಿಗಳು ಕಾಶ್ಮೀರದಲ್ಲಿ ಹಣ ಹೂಡಲು ಮುಂದಾದದ್ದು ವಿಶೇಷವೇ. ಅಲ್ ತಯ್ಯಾರ್ ಗ್ರೂಪ್, ಎಮಿರೇಟ್ಸ್ ರಾಯಲ್ ಇಂಟರ್‌ನ್ಯಾಷನಲ್ ಗ್ರೂಪ್, ಅಲ್ ಹಶೇಮಿ ಗ್ರೂಪ್‌ನ ಜತೆಗೆ, ವಿಶ್ವದ ಅತಿ ಅತ್ತರದ ಕಟ್ಟಡ ನಿರ್ಮಿಸಿದ ಎಮಾರ್ ಗ್ರೂಪ್ ಸೇರಿದಂತೆ ಒಟ್ಟು ಮೂವತ್ತಕ್ಕೂ ಹೆಚ್ಚು ಕೊಲ್ಲಿಯ ಕಂಪನಿಗಳು ಕಾಶ್ಮೀರದಲ್ಲೇ ಹಣ ಹೂಡಲು ಮುಂದಾಗಿವೆ. ಕಳೆದ ವರ್ಷ ಭಾರತ ಮತ್ತು ಯುಎಇ ನಡುವೆ ಪರಸ್ಪರ ಎಂಬತ್ತೈದು ಬಿಲಿಯನ್ ಡಾಲರ್‌ನಷ್ಟು ವಹಿವಾಟು ನಡೆದಿದೆ. ಇದು ಯುಎಇ ಮತ್ತು ಭಾರತದ ನಡುವೆ ಒಂದು ವರ್ಷದಲ್ಲಿ ನಡೆದ ವ್ಯಾಪಾರದ ಗರಿಷ್ಠ ಮೊತ್ತ. ಅದರೊಂದಿಗೆ, ಭಾರತ ಮತ್ತು ಯುಎಇ ನಡುವೆ ಸಮುದ್ರದ ಅಡಿಯಲ್ಲಿ ರೈಲು ಸಂಚಾರದ ಯೋಜನೆ ನಡೆದಿದ್ದು, ಆ ಯೋಜನೆಯ ಮೊತ್ತ ಬರೋಬ್ಬರಿ ಒಂದು ಟ್ರಿಲಿಯನ್ ಡಾಲರ್ ಎಂದು ಅಂದಾಜಿಸಲಾಗಿದೆ. ಅದಲ್ಲದೆ, ಒಮಾನ್ ದೇಶದ ಕೆಲವು ಕಂಪನಿಗಳು ಸ್ಟೇಟ್ ಬ್ಯಾಂಕ್ ಮೂಲಕ ಭಾರತದಲ್ಲಿ ಎರಡೂವರೆ ಸಾವಿರ ಕೋಟಿ ರೂಪಾಯಿ ಹಣ ಹೂಡಲು ಮುಂದಾಗಿವೆ.

ಭಾರತದ ಎಲ್ ಆ್ಯಂಡ್ ಟಿ, ಇನ್ಫೋಸಿಸ್, ಟಾಟಾ, ವಿಪ್ರೊ, ಶೋಭಾ ಮೊದಲಾದ ಕಂಪನಿಗಳು ಇಂದು ಅರಬ್ ರಾಷ್ಟ್ರದಲ್ಲಿ ಬೇರುಬಿಟ್ಟುಕೊಂಡಿವೆ. ಕಳೆದ ಒಂದೂವರೆ ವರ್ಷದಲ್ಲಿ ಭಾರತದ ಐದು ನೂರಕ್ಕೂ ಹೆಚ್ಚು ಕಂಪನಿಗಳು ಕೊಲ್ಲಿ ರಾಷ್ಟ್ರಗಳಲ್ಲಷ್ಟೇ ಅಲ್ಲ, ಆಫ್ರಿಕಾದ ಮುಸ್ಲಿಂ ರಾಷ್ಟ್ರಗಳಾದ ಸುಡಾನ್, ಈಜಿಪ್ಟ್‌ಗಳಲ್ಲೂ ನೋಂದಣಿ ಮಾಡಿಕೊಂಡಿದ್ದಲ್ಲದೆ, ಮುನ್ನೂರು ಬಿಲಿಯನ್ ಡಾಲರ್‌ಗಿಂತಲೂ ಹೆಚ್ಚಿನ ಹಣ ಹೂಡಿವೆ. ಸ್ನೇಹ ಯಾವತ್ತೂ ಏಕಮುಖವಾಗಿರಲು ಸಾಧ್ಯವಿಲ್ಲ, ಅಲ್ಲವೇ?

ಇದಕ್ಕೆ ಭಾರತದ ಇತ್ತೀಚಿನ ರಾಜತಾಂತ್ರಿಕ ನಡೆಯೂ ಕಾರಣ ಎನ್ನುವುದರಲ್ಲಿ ಅನುಮಾನವಿಲ್ಲ. ಒಂದು ಕಡೆ ಭಾರತದೊಂದಿಗಿನ ಎಲ್ಲ ಮನಸ್ತಾಪಗಳು, ತಪ್ಪು ಕಲ್ಪನೆಯನ್ನು ಹೋಗಲಾಡಿಸಿ ಅರಬ್ ದೇಶಗಳು ಹತ್ತಿರವಾಗುತ್ತಿದ್ದರೆ, ಇನ್ನೊಂದು ಕಡೆ ಅದೇ ದೇಶಗಳು ಪಾಕಿಸ್ತಾನದಿಂದ ದೂರ ಸರಿಯುತ್ತಿವೆ. ಯಾವತ್ತೂ ಹಾಗೆಯೇ, ಒಂದೇ ತೆರನಾದ ಸಂಸ್ಕೃತಿಯವರ ನಡುವೆ ಇರುವ ಸ್ನೇಹಕ್ಕಿಂತ ಬೇರೆ ಬೇರೆ ಸಂಸ್ಕೃತಿಯುಳ್ಳವರ ನಡುವೆ ಇರುವ ಸ್ನೇಹ ಅಪರೂಪದ್ದಾಗಿರುತ್ತದೆ! ಒಪ್ಪಿಕೊಳ್ಳುವ, ಬದಲಾಗುವ ಮನೋಭಾವ ಇರಬೇಕು ಅಷ್ಟೇ.

ಬೆರಗು-ಬೆಳಗು

ರಾಸುಮ ಭಟ್

ಹೀಗೊಂದು ನಿಗೂಢ ಜಗತ್ತು

ಸಮುದ್ರವು ತನ್ನೊಡಲಲ್ಲಿ ಹಲವಾರು ಕೌತುಕಗಳನ್ನು ಅಡಗಿಸಿಟ್ಟುಕೊಂಡಿದೆ. ಆದರೆ, ಬಾಹ್ಯಾಕಾಶ ಜಗತ್ತು ಮತ್ತು ಆಕಾಶಕಾಯಗಳ ಬಗ್ಗೆ ಅಪಾರ ಮಾಹಿತಿ ಕಲೆಹಾಕಿರುವ ಮನುಷ್ಯ, ಸಮುದ್ರದ ಬಗ್ಗೆ ಅರಿತಿರುವುದು ಕಮ್ಮಿಯೇ ಎನ್ನಬೇಕು. ಹೀಗಾಗಿ ಸಮುದ್ರದಾಳದ ಲೋಕವು ಈಗಲೂ ನಮಗೆ ಅಪರಿಚಿತವೇ. ಸೂರ್ಯನ ಬೆಳಕು ಸಮುದ್ರದಲ್ಲಿ ಯಾವುದೇ ತಡೆಯಿಲ್ಲದಿದ್ದರೆ 1000 ಮೀಟರ್‌ವರೆಗೆ ಚಲಿಸಬಲ್ಲದು; ಆದರೆ ಸ್ಪಷ್ಟ ಬೆಳಕು 200 ಮೀ.ವರೆಗೆ ಮಾತ್ರವೇ ಚಲಿಸುತ್ತದೆ. ಸಮುದ್ರದ ನಿಗೂಢತೆಗೆ ಇದೂ ಒಂದು ಕಾರಣವಿರಬಹುದು. ಇಂಥದೊಂದು ನಿಗೂಢ ನೆಲೆಯಾಗಿರುವ 'ಬರ್ಮುಡಾ ಟ್ರಯಾಂಗಲ್' ಜಗತ್ತಿನೆಲ್ಲೆಡೆ ಅಚ್ಚರಿಯ ವಿಷಯವಾಗಿದೆ.

ಉತ್ತರ ಅಟ್ಲಾಂಟಿಕ್ ಸಾಗರದ ದಕ್ಷಿಣ ಭಾಗದಲ್ಲಿ ಕಂಡುಬರುವ ಬರ್ಮುಡಾ ಟ್ರಯಾಂಗಲ್‌ಗೆ 'ಡೆವಿಲ್ ಟ್ರಯಾಂಗಲ್' ಎಂಬ ಹೆಸರೂ ಇದೆ. ಈ ಸ್ಥಳದ ಬಗ್ಗೆ ಈಗಾಗಲೇ ಅನೇಕ ಲೇಖನಗಳು, ಸಾಕಷ್ಟು ಕಿರುಚಿತ್ರ/ಚಲನಚಿತ್ರಗಳು ಹೊರಬಂದಿದ್ದು ಜನರಲ್ಲಿ ಭಯ, ಬೆರಗು, ಅಚ್ಚರಿ ಮೂಡುವುದಕ್ಕೂ ಈ ಸ್ಥಳ ಕಾರಣವಾಗಿದೆ. ಹೊಸ ಸಮುದ್ರಮಾರ್ಗ ಹುಡುಕಿಕೊಂಡು ಕ್ರಿಸ್ಟೋಫರ್ ಕೊಲಂಬಸ್



1492ರಲ್ಲಿ ಈ ಮಾರ್ಗವಾಗಿ ಸಂಚರಿಸುವಾಗ, ಹಡಗಿನ ದಿಕ್ಸೂಚಿಗಳು ಕೆಲಸ ಮಾಡದೆ ಆಗಸದಿಂದ ಬೆಳಕಿನ ಕಿರಣಗಳ ಗುಚ್ಛ ಸಮುದ್ರಕ್ಕೆ ಬಿದ್ದಂತೆ ಭಾಸವಾಯಿತು ಎಂದು ದಾಖಲಿಸಿದ್ದಾನೆ. ಬರ್ಮುಡಾ ಟ್ರಯಾಂಗಲ್ ಪ್ರದೇಶದಲ್ಲಿ ಸಾಕಷ್ಟು ವಿಮಾನಗಳು ಮತ್ತು ಯುದ್ಧ ನೌಕೆಗಳು ರಹಸ್ಯವಾಗಿ ಕಣ್ಮರೆಯಾಗಿರುವುದರಿಂದ ಇಲ್ಲಿ ವಿಚಿತ್ರ ಶಕ್ತಿಯಿದೆಯೆಂದೂ, ಅದೇ ಈ ಕಣ್ಮರೆಗೆ ಕಾರಣವೆಂದೂ ನಂಬಲಾಗಿದೆ. ಈ ಕುರಿತಾಗಿ ಡಿಸ್ಕವರಿ ವಾಹಿನಿಯೂ ವಿಸ್ತೃತ ಕಾರ್ಯಕ್ರಮವನ್ನು ಬಿತ್ತರಿಸಿತ್ತು.

ಈ ಪ್ರದೇಶದಲ್ಲಿ ವ್ಯಾಪಾರ ನೌಕೆಗಳು, ವಾಣಿಜ್ಯ ವಿಮಾನಗಳು ಹಾಗೂ ಖಾಸಗಿ ಜೆಟ್‌ಗಳು ಸಂಚರಿಸುವುದಿದೆ. ಕೆಲವೊಂದು ಸಂಶೋಧಕರು/ಬರಹಗಾರರ ಪ್ರಕಾರ, ಸುಮಾರು 13 ಲಕ್ಷದಿಂದ 39 ಲಕ್ಷ ಚ.ಕಿ.ಮೀ. ಸುತ್ತಳತೆ ಹೊಂದಿರುವ ಈ ಪ್ರದೇಶದಲ್ಲಿ ಈವರೆಗೆ ಸುಮಾರು 50 ಹಡಗುಗಳು ಮತ್ತು 20 ವಿಮಾನಗಳು ನಾಪತ್ತೆಯಾಗಿವೆ ಎನ್ನಲಾಗಿದೆ. ಎಲೀನಾ ಆಸ್ಟಿನ್ ಎಂಬ ಹಡಗು 1881ರಲ್ಲಿ ಈ ಪ್ರದೇಶದಲ್ಲಿ ಸಂಚರಿಸುವಾಗ ನಾಪತ್ತೆಯಾಯಿತು. ಮ್ಯಾಂಗನೀಸ್ ಅದಿರನ್ನು ಕೊಂಡೊಯ್ಯುತ್ತಿದ್ದ 'ಯು.ಎಸ್.ಸೈಕ್ಲೋಸ್' ಎಂಬ ಅಮೆರಿಕನ್ ಹಡಗು ಹಾಗೂ ಅಮೆರಿಕದ 'ಎಫ್-19' ಯುದ್ಧವಿಮಾನ (1945ರಲ್ಲಿ) ಇಂಥ ಬಲಿಪಶುಗಳಲ್ಲಿ ಹೆಸರಿಸಬಹುದಾದಂಥವು.

ಈ ಭಾಗದಲ್ಲಿ ಸಂಚರಿಸುವ ಹಡಗು ಮತ್ತು ವಿಮಾನಗಳಲ್ಲಿ ವಾತಾವರಣದ ಬದಲಾವಣೆಯಿಂದಾಗಿ ಆಗುವ ದಿಕ್ಸೂಚಿಯಲ್ಲಿನ ವ್ಯತ್ಯಾಸ ಮತ್ತು ನೀರಿನ ಆಳದಲ್ಲಿನ ಕಂಪನಗಳಿಂದಾಗಿ ಇಂಥ ಅವಘಡಗಳು ಸಂಭವಿಸುತ್ತವೆ ಎಂದು ವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ. ಬರ್ಮುಡಾ ಟ್ರಯಾಂಗಲ್ ಪ್ರದೇಶದಲ್ಲಿ ಕೆನೆಗಟ್ಟಿರುವ ಅಯಸ್ಕಾಂತೀಯ ಗುಣವೇ ಹಡಗು-ವಿಮಾನಗಳ ಇಂಥ ಪತನಕ್ಕೆ ಕಾರಣವೆಂಬುದು ಕೆಲವು ತಜ್ಞರ ಅಭಿಪ್ರಾಯವಾದರೆ, ಸಮುದ್ರದ ಈ ಭಾಗದೊಳಗಿನ ಮೀಥೇನ್ ಅನಿಲದ ಸಂಗ್ರಹದಿಂದಾಗಿ ದೊಡ್ಡ ಗಾತ್ರದ ನೀರಿನ ಗುಳ್ಳೆಗಳುಂಟಾಗುತ್ತವೆ ಮತ್ತು ಆ ಗುಳ್ಳೆಗಳು ಒಡೆದಾಗ ಸೃಷ್ಟಿಯಾಗುವ ಭಾರಿ ಗಾತ್ರದ ಜಲರಾಶಿ ಹಡಗನ್ನು ಮುಳುಗಿಸುತ್ತದೆ ಎಂದು ಮತ್ತೆ ಕೆಲವರು ಹೇಳುತ್ತಾರೆ. ಒಟ್ಟಿನಲ್ಲಿ, ಆಧುನಿಕ ಜಗತ್ತಿನಲ್ಲಿ ತಂತ್ರಜ್ಞಾನ ಎಷ್ಟೇ ಮುಂದುವರಿದಿದ್ದರೂ ಬರ್ಮುಡಾ ಟ್ರಯಾಂಗಲ್‌ನ ಈ ರಹಸ್ಯವಿನ್ನೂ ಬಯಲಾಗಿಲ್ಲ ಎಂಬುದು ಅಚ್ಚರಿಯೇ ಸರಿ.

(ಲೇಖಕರು ಸಂಶೋಧನಾ ವಿದ್ಯಾರ್ಥಿ)

ಹಣ ಸುರಕ್ಷಿತವಾಗಿಡಲು ಮಾರ್ಗೋಪಾಯಗಳು

ಹೆಚ್ಚಿನ ಸಹಕಾರಿ ಸಂಘಗಳು/ಸಹಕಾರಿ ಬ್ಯಾಂಕುಗಳು ಲಾಗಾಯ್ತಿನಿಂದಲೂ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆಯಾದರೂ, ಈ ಪೈಕಿ ಕೆಲವು ಒಮ್ಮೊಮ್ಮೆ ಅತಿಹೆಚ್ಚಿನ ಬಡ್ಡಿ ನೀಡುವ ಆಮಿಷ ತೋರಿಸಿ ಠೇವಣಿದಾರರರಿಗೆ ಮೋಸಮಾಡುವುದುಂಟು, ನಾಮ ಹಾಕುವುದುಂಟು. ಹೀಗಾಗಿ ಗ್ರಾಹಕರು ವಿವೇಚನೆಯಿಂದ ವರ್ತಿಸಬೇಕು.

ವಿತ್ತಲೋಕ

ಗೋಪಾಲಕೃಷ್ಣ ಭಟ್ ಬಿ.
vveditoped@gmail.com

ಭಾರತದಲ್ಲಿ ನಾಲ್ಕು ವಿಧದ ಸಹಕಾರಿ ಬ್ಯಾಂಕುಗಳಿವೆ. ಅವೆಂದರೆ: 1) ಕೇಂದ್ರ ಸಹಕಾರಿ ಬ್ಯಾಂಕುಗಳು 2) ರಾಜ್ಯ ಸಹಕಾರಿ ಬ್ಯಾಂಕುಗಳು 3) ಪ್ರಾಥಮಿಕ ಸಹಕಾರಿ ಬ್ಯಾಂಕುಗಳು ಮತ್ತು 4) ಭೂ ಅಭಿವೃದ್ಧಿ ಬ್ಯಾಂಕುಗಳು. ಇತ್ತೀಚಿನ ಅಂಕಿ-ಅಂಶಗಳ ಪ್ರಕಾರ, ಕರ್ನಾಟಕದಲ್ಲಿ 52 ಸಹಕಾರಿ ಬ್ಯಾಂಕುಗಳು, 45,926 ಸಹಕಾರಿ ಸಂಘಗಳಿವೆ. ಈ ಸಂಘಗಳ ಪೈಕಿ 6,040ರಷ್ಟು ಪ್ರಾಥಮಿಕ ಕೃಷಿ ಸಾಲ ಸಂಘಗಳಾಗಿವೆ ಮತ್ತು 15 ಸಾವಿರಕ್ಕೂ ಅಧಿಕ ಪ್ರಾಥಮಿಕ ಹಾಲು ಸಹಕಾರ ಸಂಘಗಳು ಕೆಎಂಎಫ್‌ಗೆ ಸೇರಿವೆ.

ಇಂದು ಸಾರ್ವಜನಿಕರಲ್ಲಿ ಅನೇಕರಿಗೆ, ಸಹಕಾರಿ ಬ್ಯಾಂಕುಗಳು (Co-operative Banks) ಮತ್ತು ಸಹಕಾರಿ ಸಂಘಗಳು (Co-operative Societies) ಇವುಗಳ ನಡುವಿನ ಭಿನ್ನತೆಯ ಬಗ್ಗೆ ಹಲವು ಅನುಮಾನಗಳಿವೆ. ಇವುಗಳ ಪ್ರಧಾನ ಸ್ವರೂಪ, ವೈಶಿಷ್ಟ್ಯಗಳು ಮತ್ತು ಕಾರ್ಯವ್ಯಾಪ್ತಿಯ ಬಗ್ಗೆ ತಿಳಿಯಲು ಪ್ರಯತ್ನಿಸೋಣ.

ಮೊದಲನೆಯದಾಗಿ, ಸಹಕಾರಿ ಬ್ಯಾಂಕುಗಳು ಸಹಕಾರಿ ಸೊಸೈಟಿ ಕಾಯ್ದೆಯಡಿಯಲ್ಲಿ ನೋಂದಾಯಿಸಲ್ಪಟ್ಟಿರುತ್ತವೆ. ಇವು ಯಾವುದೇ ವ್ಯಕ್ತಿಯೊಂದಿಗೆ ಬ್ಯಾಂಕಿಂಗ್ ವ್ಯವಹಾರವನ್ನು ಮಾಡಲು ಭಾರತೀಯ ರಿಸರ್ವ್ ಬ್ಯಾಂಕಿನಿಂದ (ಆರ್‌ಬಿಐ) ಪರವಾನಗಿ ಪಡೆದಿರುತ್ತವೆ. ಇವುಗಳನ್ನು ಆರ್‌ಬಿಐ ನಿಯಂತ್ರಿಸುತ್ತದೆ. ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949 ಮತ್ತು ಬ್ಯಾಂಕಿಂಗ್ ಕಾನೂನುಗಳು (ಸಹಕಾರಿ ಸಂಘಗಳು) ಕಾಯ್ದೆ 1955ರ ಮೂಲಕ ಇವನ್ನು ನಿಯಂತ್ರಿಸಲಾಗುತ್ತದೆ ಎಂಬುದು ಗಮನಾರ್ಹ.

ಸಹಕಾರಿ ಬ್ಯಾಂಕುಗಳು ಆರ್‌ಬಿಐ ಆದೇಶದಿಂದಾಗಿ, ಪರವಾನಗಿಗಳ ರದ್ದತಿ/ನಿರ್ಬಂಧದ ಪರಿಣಾಮವಾಗಿ ಮುಚ್ಚಲ್ಪಟ್ಟರೆ ಅಥವಾ ದಿವಾಳಿಯಾದರೆ, ಠೇವಣಿದಾರರು 'ಠೇವಣಿ ವಿಮೆ ಮತ್ತು ಕ್ರೆಡಿಟ್ ಗ್ಯಾರಂಟಿ ಕಾರ್ಪೊರೇಷನ್'ನಿಂದ (DICGC) 5 ಲಕ್ಷ ರು.ವರೆಗೆ ವಿಮೆಗೆ ಅರ್ಹರಾಗಿರುತ್ತಾರೆ. ಅದಕ್ಕೆ ತಕ್ಕಂತೆ ವಿಮೆಯ ಕಂತನ್ನು ಸಹಕಾರಿ ಬ್ಯಾಂಕುಗಳು DICGCಗೆ ಪ್ರತಿ ವರ್ಷವೂ ಪಾವತಿಸಿರಬೇಕು. ಪರವಾನಗಿಗಳ ರದ್ದತಿಯ ಪರಿಣಾಮವಾಗಿ, ಇತರ ವಿಷಯಗಳ ಜತೆಗೆ ಠೇವಣಿಗಳ ಸ್ವೀಕಾರ ಮತ್ತು ಮರುಪಾವತಿಯನ್ನು ಒಳಗೊಂಡಿರುವ ಬ್ಯಾಂಕಿಂಗ್ ವ್ಯವಹಾರವನ್ನು ನಡೆಸಲು ಸಹಕಾರಿ ಬ್ಯಾಂಕುಗಳನ್ನು ನಿಷೇಧಿಸಲಾಗುತ್ತದೆ.

ಸಹಕಾರಿ ಬ್ಯಾಂಕುಗಳು ತಮ್ಮ ನಿರ್ದಿಷ್ಟ ಸಮುದಾಯದ ಬಂಡವಾಳದ ಅಗತ್ಯಗಳನ್ನು ನೆರವೇರಿಸಲು ವ್ಯಕ್ತಿಗಳ ಗುಂಪಿನಿಂದ ಪ್ರಾರಂಭಿಸಿದ ಸಣ್ಣ ಹಣಕಾಸು ಸಂಸ್ಥೆಯನ್ನು ಉಲ್ಲೇಖಿಸುತ್ತವೆ. ಕಾರ್ಯಾಚರಣೆಗಳನ್ನು ಮೇಲ್ವಿಚಾರಣೆ ಮಾಡಲು ಮಂಡಳಿಯ ಸದಸ್ಯರನ್ನು ಪ್ರಜಾಸತ್ತಾತ್ಮಕವಾಗಿ ಆಯ್ಕೆ ಮಾಡಲಾಗುತ್ತದೆ. 'ಒಬ್ಬ ವ್ಯಕ್ತಿ, ಒಂದು ಮತ' ಎಂಬ ತತ್ವವನ್ನು ಇಲ್ಲಿ ಅನುಸರಿಸಲಾಗುತ್ತದೆ. ಠೇವಣಿಗಳು ಮತ್ತು ಸಾಲಗಳಿಗೆ ಕೈಗೆಟುಕುವ ಬಡ್ಡಿದರಗಳ ಮೂಲಕ ಸದಸ್ಯರನ್ನು ಅಭಿವೃದ್ಧಿಪಡಿಸುವುದರ ಮೇಲೆ ಗಮನವನ್ನು ಕೇಂದ್ರೀಕರಿಸುವುದು ಇವುಗಳ ಪ್ರಮುಖ ಶಕ್ತಿ. ಹಳ್ಳಿಗಳಲ್ಲಿ ಇವು ಜನರ ಜೀವನಾಡಿಯಾಗಿವೆ. ಆದರೆ, ಸದಸ್ಯರಲ್ಲಿ ವೃತ್ತಿಪರತೆ ಮತ್ತು ತಾಂತ್ರಿಕ ಜ್ಞಾನದ ಕೊರತೆ, ಮೂಲ ಸೌಕರ್ಯದ ಅಲಭ್ಯತೆ ಇವು ಈ ವಲಯದ ಬ್ಯಾಂಕುಗಳ ನ್ಯೂನತೆ ಎನ್ನಲಾಗುತ್ತದೆ.

ಆದರೆ, ಸಹಕಾರಿ ಸಂಘಗಳು ಆರ್‌ಬಿಐನ ಅನುಮತಿ ಅಥವಾ ಪರವಾನಗಿ ಇಲ್ಲದ ಸೊಸೈಟಿಗಳಾಗಿದ್ದು, ಸಮಾಜದ ಸದಸ್ಯರೊಂದಿಗೆ ಮಾತ್ರ ಇವು ವ್ಯವಹರಿಸಬಹುದು. ಇವು ಸೊಸೈಟಿ ಕಾಯ್ದೆ 1959ರ ಅನುಸಾರ ನೋಂದಾಯಿಸಲ್ಪಟ್ಟಿರುತ್ತವೆ ಹಾಗೂ ಶೈಕ್ಷಣಿಕ, ಧಾರ್ಮಿಕ ಸಂಘಗಳೂ ಈ ಕಾಯ್ದೆಯ ಅಡಿಯಲ್ಲಿ ಬರುತ್ತವೆ. ಮುಖ್ಯವಾಗಿ, ಸಹಕಾರಿ ಸಂಘಗಳು ಮುಚ್ಚಲ್ಪಟ್ಟರೆ/ದಿವಾಳಿಯಾದರೆ, ಠೇವಣಿದಾರರು 'ಡಿಐಸಿಜಿಸಿ'ಯಿಂದ ಯಾವುದೇ ವಿಮೆಗೆ ಅರ್ಹರಿರುವುದಿಲ್ಲ ಮತ್ತು ಠೇವಣಿದಾರರಿಗೆ ಕಾನೂನುಬದ್ಧವಾಗಿ ಯಾವುದೇ ಪರಿಹಾರ ಸಿಗುವುದಿಲ್ಲ. ಹೆಚ್ಚಿನ ಸಹಕಾರಿ ಸಂಘಗಳು/ಸಹಕಾರಿ ಬ್ಯಾಂಕುಗಳು ಲಾಗಾಯ್ತಿನಿಂದಲೂ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆಯಾದರೂ, ಒಮ್ಮೊಮ್ಮೆ ಕೆಲವೊಂದು ಸಹಕಾರಿ ಸಂಘಗಳು/ಸಹಕಾರಿ ಬ್ಯಾಂಕುಗಳು ಅತಿಹೆಚ್ಚಿನ ಬಡ್ಡಿ ನೀಡುವ ಆಮಿಷ ತೋರಿಸಿ ಠೇವಣಿದಾರರಿಗೆ ಮೋಸಮಾಡುವುದುಂಟು, ನಾಮ ಹಾಕುವುದುಂಟು. ಮತ್ತೊಂದೆಡೆ, ದೊಡ್ಡ ಮೊತ್ತದ ಸಾಲಗಳು ಮರುಪಾವತಿಯಾಗದಿದ್ದಲ್ಲಿ, ಇವುಗಳ ಬಂಡವಾಳ ಕ್ಷೀಣಿಸಿ ದಿವಾಳಿಯಾಗುವ ಸಂದರ್ಭಗಳೂ ಇವೆ. ಆದ್ದರಿಂದ, ಮಹಿಳೆಯರು ಮತ್ತು ಹಿರಿಯ ನಾಗರಿಕರು ಸೇರಿದಂತೆ ಸಾರ್ವಜನಿಕರು ತಾವು ಕಷ್ಟಪಟ್ಟು ಕಲೆಹಾಕಿದ ಜೀವಮಾನದ ಉಳಿತಾಯದ ಹಣವನ್ನು ಅಥವಾ ದೊಡ್ಡ ಮಟ್ಟದ ಠೇವಣಿಯನ್ನು ಇರಿಸುವಾಗ, ಈ ಸಹಕಾರಿ ಬ್ಯಾಂಕುಗಳು ಅಥವಾ ಸಹಕಾರಿ ಸಂಘಗಳು ಎಷ್ಟು ಸುರಕ್ಷಿತ ಮತ್ತು ವಿಶ್ವಾಸಾರ್ಹ ಎಂಬುದನ್ನು ಒಮ್ಮೆ ಪರಿಶೀಲಿಸಬೇಕಾಗುತ್ತದೆ. ಇದಕ್ಕಾಗಿರುವ ಒಂದಷ್ಟು ಮುನ್ನೆಚ್ಚರಿಕೆಗಳನ್ನು ಗಮನಿಸೋಣ:

- ದೊಡ್ಡ ಮೊತ್ತದ ಠೇವಣಿ ಇರಿಸುವ ಮೊದಲು ಅದು ಸಹಕಾರಿ ಬ್ಯಾಂಕೋ ಅಥವಾ ಸಹಕಾರಿ ಸಂಘವೋ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಆರ್‌ಬಿಐ ಪರವಾನಗಿ ಹೊಂದಿದ್ದರೆ ಅವು ಸಹಕಾರಿ ಬ್ಯಾಂಕು ಎನಿಸಿಕೊಳ್ಳುತ್ತವೆ.
- ಇವು ರಾಷ್ಟ್ರೀಕೃತ ಬ್ಯಾಂಕು ಅಥವಾ ಖಾಸಗಿ ಬ್ಯಾಂಕುಗಳಿಗಿಂತ ಸುಮಾರು ಶೇ.3ರಿಂದ 7ರವರೆಗೆ ಹೆಚ್ಚು ಬಡ್ಡಿ ಕೊಡುತ್ತವೆ ಅಂತಾದರೆ, ಅದು ಸ್ವಲ್ಪ ಅನುಮಾನಕ್ಕೆ ಎಡೆಮಾಡಿಕೊಡುತ್ತದೆ.

- ಸಹಕಾರಿ ಬ್ಯಾಂಕಿನ ಮತ್ತು ಅದರ ಆಡಳಿತ ಮಂಡಳಿಯವರ ಬಗ್ಗೆ, ಅವರ ವಿದ್ಯಾರ್ಹತೆ, ಆರ್ಥಿಕ ಮತ್ತು ಕೌಟುಂಬಿಕ ಹಿನ್ನೆಲೆ, ವ್ಯವಹಾರ ಶೈಲಿ, ಪ್ರಾಮಾಣಿಕತೆ/ವಿಶ್ವಾಸಾರ್ಹತೆ ಇತ್ಯಾದಿಗಳ ಬಗ್ಗೆ ಸೂಕ್ಷ್ಮವಾಗಿ ಮಾಹಿತಿ ಸಂಗ್ರಹಿಸಬೇಕು.
- ಅವುಗಳ ಆಯವ್ಯಯ ಪಟ್ಟಿಯನ್ನು ಆಳವಾಗಿ ಪರಿಶೀಲಿಸಬೇಕು. ಸಹಕಾರಿ ಬ್ಯಾಂಕಿನ ಸ್ಥಿರಾಸ್ತಿ, ನಿವ್ವಳ ಲಾಭ, ಲಾಭಾಂಶ ಪಾವತಿಗಳು, ಸಾಲದ ಬಂಡವಾಳ, ಸುರಕ್ಷಿತ ಸಾಲ, ಅನುತ್ಪಾದಕ ಸಾಲ ಇತ್ಯಾದಿಗಳ ಬಗ್ಗೆ ವಿಶ್ಲೇಷಿಸಬೇಕು.
- ಗರಿಷ್ಠ ಸದಸ್ಯರಿಗೆ ಸಾಲದ ಮೊತ್ತದ ವಿತರಣೆಯಾಗಿರಬೇಕು; ದೊಡ್ಡ ಮೊತ್ತದ ಸಾಲವು ಕೆಲವೇ ಸದಸ್ಯರ/ಆಡಳಿತ ಮಂಡಳಿಯ ಕುಟುಂಬಿಕರ/ಸಂಬಂಧಿಕರ/ಸ್ನೇಹಿತರ ಪಾಲಾಗಿರಬಾರದು.
- ಸಹಕಾರಿ ಬ್ಯಾಂಕು 'ಡಿಐಸಿಜಿಸಿ'ಗೆ ವಿಮೆ ಶುಲ್ಕವನ್ನು ತಪ್ಪಿಲ್ಲದಂತೆ ಪಾವತಿಸುತ್ತಿದೆಯೇ ಎಂಬುದನ್ನು ಖಾತ್ರಿಪಡಿಸಿಕೊಳ್ಳಬೇಕು.

ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಿದ ಮೇಲೆ ಜನರು ತಮ್ಮ ಸ್ವಂತ ರಿಸ್ಕ್‌ನಲ್ಲಿ ಠೇವಣಿ ಇರಿಸಬಹುದು. ಸಹಸದಸ್ಯರಾದರೆ ಮತದಾನಕ್ಕೆ ಮತ್ತು ವಾರ್ಷಿಕ ಮಹಾಸಭೆಗಳಲ್ಲಿ ಭಾಗವಹಿಸುವುದಕ್ಕೆ ಯಾವುದೇ ಹಕ್ಕುಗಳು ಇರುವುದಿಲ್ಲ.

ಅಷ್ಟಕ್ಕೂ, ಸಹಕಾರಿ ಬ್ಯಾಂಕುಗಳು ದಿವಾಳಿಯಾಗಿ ಮುಚ್ಚಲ್ಪಡುವುದೇಕೆ? ಎಂಬ ಪ್ರಶ್ನೆ ಕೆಲವರಲ್ಲಿ ಉದ್ಭವಿಸಬಹುದು. ಆರ್‌ಬಿಐನ ತಪಾಸಣೆಯ ಹೊರತಾಗಿಯೂ ಕೆಲ ಸಹಕಾರಿ ಬ್ಯಾಂಕುಗಳು ದಿವಾಳಿಯಾಗಿವೆ. ಇಲ್ಲಿ ಆರ್‌ಬಿಐ ಅಧಿಕಾರಿಯು ಪರಿಶೀಲನೆ/ತಪಾಸಣೆ ಮಾಡಿದಾಗ ಎಲ್ಲಾ ಲೋಪದೋಷಗಳು ಸಿಕ್ಕಿಬಿಡುತ್ತವೆ ಎಂದೇನಲ್ಲ, ಕೆಲವೊಂದು ತಪ್ಪುಗಳು/ಲೋಪದೋಷಗಳು ಉದ್ದೇಶರಹಿತವಾಗಿ ಗೋಚರವಾಗದೆ ಇರಬಹುದು. ಹಿಂದೆ ತಿಳಿಸಿದ ಕಾರಣಗಳಲ್ಲದೆ ಕೆಲವು ಪ್ರಕರಣಗಳಲ್ಲಿ, ಮುಖ್ಯವಾಗಿ ಸಾಲ ಮಂಜೂರು ಮಾಡುವಾಗ, ಆಸ್ತಿ ಗುಣಮಟ್ಟ ಉತ್ತಮವಾಗಿರುವುದಿಲ್ಲ. ಉದಾಹರಣೆಗೆ 'ಬಿ' ಖಾತಾ ದಾಖಲೆಯ ಆಸ್ತಿ ಅಕ್ರಮವಾಗಿರುತ್ತದೆ ಅಥವಾ ಸರಕಾರದ ನಿಯಮಗಳ ಉಲ್ಲಂಘನೆಯಾಗಿದೆ ಎಂದು ಅದು ಸೂಚಿಸುತ್ತದೆ. ಸಾಲದ ಅರ್ಹತೆ ಜಾಸ್ತಿ ಇರುವುದಿಲ್ಲ, ಸಿಬಿಲ್ ಸ್ಕೋರ್ ಚೆನ್ನಾಗಿರುವುದಿಲ್ಲ, ವಹಿವಾಟು ದಾಖಲೆಗಳು ಸರಿ ಇರುವುದಿಲ್ಲ, ರೂಢಿಗಳ ಪ್ರಕಾರ ಮರುಪಾವತಿ ಸಾಮರ್ಥ್ಯ ಚೆನ್ನಾಗಿರುವುದಿಲ್ಲ. ಈ ಕಾರಣಗಳಿಗೋಸ್ಕರ ಹೆಚ್ಚು ಬಡ್ಡಿ ಆದರೂ ಸಾಲಗಾರರು ಸಹಕಾರಿ ಬ್ಯಾಂಕುಗಳ ಮೊರೆಹೋಗುತ್ತಾರೆ. ಹಾಗೆಯೇ ಸಹಕಾರಿ ಬ್ಯಾಂಕುಗಳು ಅಧಿಕ ಬಡ್ಡಿದರದಲ್ಲಿ, ಉದಾರ ನೀತಿಯಲ್ಲಿ ಸಾಲವನ್ನು ಮಂಜೂರು ಮಾಡುತ್ತವೆ. ಇಲ್ಲಿ ನಿಗದಿತ ಮಾನದಂಡಗಳ ಅನುಸರಣೆ ಆಗಿರುವುದಿಲ್ಲ. ಇಂಥ ಪರಿಸ್ಥಿತಿಗಳಲ್ಲಿ ಸಾಲಗಾರರು ಸಾಲವನ್ನು ಮರುಪಾವತಿಸದೆ, ಸಹಕಾರಿ ಬ್ಯಾಂಕುಗಳ ಅನುತ್ಪಾದಕ ಆಸ್ತಿಯ (ಎನ್‌ಪಿಎ) ಪ್ರಮಾಣ ಹೆಚ್ಚಾಗಿ, ಲಾಭಾಂಶ ಇಳಿಮುಖವಾಗಿ, ಅವು ನಷ್ಟದಲ್ಲಿ ಸಿಲುಕುವ ಬ್ಯಾಂಕುಗಳಾಗಿ ಪರಿವರ್ತಿತವಾಗುತ್ತವೆ.

ಸಹಕಾರಿ ಸಂಘ/ಸಹಕಾರಿ ಬ್ಯಾಂಕುಗಳಲ್ಲಿ ಅಥವಾ ರಾಷ್ಟ್ರೀಕೃತ ಬ್ಯಾಂಕು/ಖಾಸಗಿ ಬ್ಯಾಂಕುಗಳಲ್ಲಿ ಠೇವಣಿಯಿಟ್ಟರೆ ನಿರ್ದಿಷ್ಟ ಆದಾಯವು ಬಡ್ಡಿಯ ರೂಪದಲ್ಲಿ ಸಿಗುತ್ತದೆ. ಷೇರು ಮಾರುಕಟ್ಟೆ, ಮ್ಯೂಚುವಲ್ ಫಂಡ್ ಇತ್ಯಾದಿಗಳೆಲ್ಲವೂ 'ಮಾರ್ಕೆಟ್ ರಿಸ್ಕ್'ಗೆ ಒಳಪಟ್ಟಿವೆ. ಆದ್ದರಿಂದ ಹೂಡಿಕೆ ಮಾಡುವಾಗ ನಾವು ವಿವೇಚನೆಯಿಂದ ವರ್ತಿಸಿ ನಮ್ಮ ಹೂಡಿಕೆ ಹಣವನ್ನು ಸುರಕ್ಷಿತವಾಗಿಸಿಕೊಳ್ಳಬೇಕು.

(ಲೇಖಕರು ನಿವೃತ್ತ ಬ್ಯಾಂಕ್ ಅಧಿಕಾರಿ)

ಪ್ರತಿಸ್ಪಂದನ

ಬೆಳ್ಳಿ ಚಂದ್ರಶೇಖರಶೆಟ್ಟಿ

ಗಂಭೀರವಾಗಿ ಪರಿಗಣಿಸಿ

ಪತ್ತಂಗಿ ಎಸ್.ಮುರಳಿಯವರು 'ಓದುಗರ ಒಣಿ' ವಿಭಾಗದಲ್ಲಿ (ವಿಶ್ವವಾಣಿ ಮಾ.2), ಸರಕಾರಿ ಉದ್ಯೋಗ ಬಯಸುವವರು ಎರಡಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದುವಂತಿಲ್ಲ ಎಂಬುದಾಗಿ ರಾಜಸ್ಥಾನ ಸರಕಾರ ರೂಪಿಸಿರುವ ನಿಯಮವನ್ನು ಸರಕಾರಿ ಉದ್ಯೋಗಗಳ ಆಕಾಂಕ್ಷಿಗಳಿಗೆ ಮಾತ್ರವಲ್ಲದೆ ಎಲ್ಲೆಡೆ ಜಾರಿಗೆ ತರಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಭಾರತದ ಜನಸಂಖ್ಯಾ ಸ್ಫೋಟವನ್ನು ನಿಯಂತ್ರಿಸುವಲ್ಲಿ ಈ ಅಭಿಪ್ರಾಯವನ್ನು ಗಂಭೀರವಾಗಿ ಪರಿಗಣಿಸುವ ಅಗತ್ಯವಿದೆ. ಪ್ರಸ್ತುತ, ಕೇಂದ್ರ ಮತ್ತು ಹಲವು ರಾಜ್ಯಗಳ ಮಹಿಳಾ ಸರಕಾರಿ ಉದ್ಯೋಗಿಗಳಿಗೆ ಎರಡು ಮಕ್ಕಳನ್ನು ಪಡೆಯುವವರೆಗೆ ಮಾತ್ರ ಪೂರ್ಣ ವೇತನ ಸಹಿತ 6 ತಿಂಗಳ ಹೆರಿಗೆ ರಜದ ಸೌಲಭ್ಯವಿದ್ದು, ನಂತರದ ಹೆರಿಗೆಗೆ ಅದು ಅನ್ವಯವಾಗುವುದಿಲ್ಲ. ಮಾತ್ರವಲ್ಲದೆ, 1 ಅಥವಾ 2 ಮಕ್ಕಳನ್ನು ಹೊಂದಿದ್ದು ಮುಂದೆ ಮಕ್ಕಳು ಬೇಡವೆಂದು ಶಸ್ತ್ರಚಿಕಿತ್ಸೆ ಮಾಡಿಸಿಕೊಂಡವರಿಗೆ, ಕಿರುಕುಟುಂಬವನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಒಂದು ವೇತನ ಬಡ್ತಿಯನ್ನೂ ಮಂಜೂರು ಮಾಡಲಾಗುತ್ತದೆ.

ದೇಶದ ಒಟ್ಟು ಜನಸಂಖ್ಯೆಯನ್ನು ಗಮನಿಸಿದಾಗ, ಸರಕಾರಿ ಉದ್ಯೋಗಿಗಳ ಸಂಖ್ಯೆ ಗೌಣ; ಆದರೆ ಇತರೆ ಖಾಸಗಿ ಸಂಸ್ಥೆಗಳಲ್ಲಿನ ಉದ್ಯೋಗಿಗಳ ಸಂಖ್ಯೆ ಗಣನೀಯವಾಗಿದೆ. ವಿಚಿತ್ರವೆಂದರೆ, 2017ರಲ್ಲಿ ತಿದ್ದುಪಡಿಯಾದ ಹೆರಿಗೆ ಕಾಯ್ದೆಯನುಸಾರ, ಮೊದಲ ಎರಡು ಮಕ್ಕಳ ಹೆರಿಗೆಗೆ ಆರು ತಿಂಗಳ ರಜೆ ಸೌಲಭ್ಯವಲ್ಲದೆ, ನಂತರದ ಎಲ್ಲ ಹೆರಿಗೆಗಳಿಗೂ 12 ತಿಂಗಳ ಪೂರ್ಣವೇತನ ಸೌಲಭ್ಯಕ್ಕೆ ಮಹಿಳೆಯರು ಅರ್ಹರಾಗುತ್ತಾರೆ! ಅಲ್ಲದೆ, ಗರ್ಭಾವಸ್ಥೆ ಆರೋಗ್ಯಕ್ಕೆ ಅಗತ್ಯವೆಂದು ಕಂಡುಬಂದಲ್ಲಿ ಇನ್ನೂ ಒಂದು ತಿಂಗಳ ವೇತನ ಸಹಿತ ರಜೆಗೂ ಅವಕಾಶವಿದೆ. ಈ ರಜಾ ಅವಧಿ ಮುಗಿದ ನಂತರವೂ ಸಾಧ್ಯವಾದಷ್ಟು ಮಟ್ಟಿಗೆ ಮನೆಯಿಂದಲೇ ಕೆಲಸ ನಿರ್ವಹಿಸಲು ಅವಕಾಶ ಕಲ್ಪಿಸುವ ಸಲಹೆಯೂ ಕಾಯ್ದೆಯಲ್ಲಿದೆ. ಅಲ್ಲದೆ, ಪುರುಷ-ಸ್ತ್ರೀಯರು ಸೇರಿದಂತೆ 50 ಅಥವಾ ಅದಕ್ಕಿಂತ ಹೆಚ್ಚು ಉದ್ಯೋಗಿಗಳನ್ನು ಒಳಗೊಂಡಿರುವ ಸಂಸ್ಥೆಯ ಮಾಲೀಕರು, ಸದರಿ ನೌಕರರ ಮಕ್ಕಳಿಗಾಗಿ ನಿಗದಿತ ಸೌಲಭ್ಯಗಳನ್ನೊಳಗೊಂಡ ಶಿಶುಕೇಂದ್ರವನ್ನೂ ಒದಗಿಸಬೇಕು. ಇಷ್ಟೆಲ್ಲಾ ಸೌಲಭ್ಯ ಪುಕ್ಕಟೆ ಸಿಗುವಾಗ, ಸಹಜವಾಗಿಯೇ ಅದನ್ನು ಉಪಯೋಗಿಸಿಕೊಳ್ಳುವ ಮನಸ್ಥಿತಿಯವರೂ ಇರುತ್ತಾರೆ. ಜನಸಂಖ್ಯಾ ನಿಯಂತ್ರಣದ ದೃಷ್ಟಿಯಿಂದಲಾದರೂ ಇಂಥ ಸೌಲಭ್ಯಗಳನ್ನು ಗರಿಷ್ಠ ಎರಡು ಹೆರಿಗೆಗಳಿಗೆ ಸೀಮಿತಗೊಳಿಸುವ ಅಗತ್ಯವಿದೆ.



ಹೆರಿಗೆ ಸೌಲಭ್ಯ ಕಾಯ್ದೆಗೆ ತಂದ ತಿದ್ದುಪಡಿಯು ಖಾಸಗಿ ಉದ್ಯಮಗಳಿಗೆ ಹೊರೆಯಾಗಿದೆ. ಇದು ಸ್ತ್ರೀಯರ ನೇಮಕಾತಿಯ ಅವಕಾಶಕ್ಕೂ ಕುತ್ತು ತರುವ ಸಂಭವವಿದೆ ಹಾಗೂ ಈಗಾಗಲೇ ಅವರ ನೇಮಕಾತಿಯ ವಿಷಯದಲ್ಲಿ ಮಾಲೀಕರು ಹತ್ತು ಸಲ ಯೋಚಿಸುವಂತೆ ಅದು ಮಾಡಿದೆ. ಪರಿಸ್ಥಿತಿ ಯಾವ ಹಂತಕ್ಕೆ ತಲುಪಿದೆಯೆಂದರೆ, ಈ ಸೌಲಭ್ಯ ನೀಡಿಕೆಯ ಭಾರದಿಂದ ಬಚಾವಾಗಲು, ಮಹಿಳಾ ಅಭ್ಯರ್ಥಿಗಳು ನೌಕರಿ ಪಡೆಯಲು ಭರ್ತಿಮಾಡಬೇಕಾಗಿ ಬರುವ ಅರ್ಜಿಗಳಲ್ಲಿ, ಕೊನೆಯದಾಗಿ ಮುಟ್ಟಾಗಿರುವ ದಿನಾಂಕದ ವಿವರವನ್ನೂ ಕೆಲವೆಡೆ ಕೇಳಲಾಗುತ್ತದೆಯಂತೆ! ಯಾವುದೇ ಸೂಕ್ತ ವಿಮಾ ಯೋಜನೆ ಅಥವಾ ಸರಕಾರದ ನೆರವು ಇಲ್ಲದ, ಮಾಲೀಕರ ಮೇಲೆ ಸಂಪೂರ್ಣ ಭಾರ ಹೇರುವ ಈ ಹೆರಿಗೆ ಸೌಲಭ್ಯದ ನಿಯಮವು ಅಭಿವೃದ್ಧಿ ಹೊಂದಿದ ಎಲ್ಲ ರಾಷ್ಟ್ರಗಳಲ್ಲಿಲ್ಲ. ಆದ್ದರಿಂದ, ಇಂಥ ಸೌಲಭ್ಯಗಳನ್ನು ಒಂದು ಮಗುವಿನ ಹೆರಿಗೆಗೆ ಸೀಮಿತಗೊಳಿಸುವ ಬಗ್ಗೆ ಸರಕಾರ ಸೂಕ್ತ ತಿದ್ದುಪಡಿ ತರಬೇಕು ಹಾಗೂ ಈ ಮಿತಿ ಮೀರಿದವರಿಗೆ ಸರಕಾರ ಯಾವುದೇ ವಿನಾಯಿತಿ/ಸೌಲಭ್ಯ ನೀಡಬಾರದು. ಮಾತ್ರವಲ್ಲ, ನಿಗದಿತ ಸಂಖ್ಯೆ ಮೀರಿದ ಮಕ್ಕಳಿರುವ ಯಾವ ವ್ಯಕ್ತಿಗೂ ಪಂಚಾಯಿತಿಯಿಂದ ಲೋಕಸಭೆವರೆಗೆ ಸದಸ್ಯತ್ವ ಹೊಂದಲು ಅವಕಾಶ ಕಲ್ಪಿಸಬಾರದು; ಒಂದೊಮ್ಮೆ ಮಿತಿ ಉಲ್ಲಂಘಿಸಿದಲ್ಲಿ ಸದಸ್ಯತ್ವ ರದ್ದಾಗುವಂಥ ಹಾಗೂ ಅದು ಯಾವ ಭೇದಭಾವವಿಲ್ಲದೆ ಎಲ್ಲ ವರ್ಗಕ್ಕೂ ಅನ್ವಯಿಸುವಂಥ ಕಾನೂನು ತರಬೇಕು. ಇದು ನಮ್ಮ ದೇಶದಲ್ಲಿ ಸಾಧ್ಯವೇ?

(ಲೇಖಕರು ಹವ್ಯಾಸಿ ಬರಹಗಾರರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue:70